# ನಾರಿಶಕ್ತಿ ವಂದನ ಅಧಿನಿಯಮ, 2023 ಮತ್ತು ಮಹಿಳಾ ರಾಜಕೀಯ ಸಬಲೀಕರಣ: ಒಂದು ವಿಶ್ಲೇಷಣೆ

**ಗಂಗಾಧರ ಪಿ.ಎಸ್.**
ಸಹ ಪ್ರಾಧ್ಯಾಪಕರು, ರಾಜ್ಯಶಾಸ್ತ್ರ ವಿಭಾಗ, ಸರ್ಕಾರಿ ಕಲಾ ಕಾಲೇಜು (ಸ್ವಾಯತ್ತ ), ಚಿತ್ರದುರ್ಗ.

DOI: https://doi.org/10.5281/zenodo.18849548

## ABSTRACT:

ಸಂವಿಧಾನ ಶಿಲ್ಪಿ ಡಾ. ಬಿ. ಆರ್. ಅಂಬೇಡ್ಕರ್‌ರವರು "ನಾನು ಸಮುದಾಯವೊಂದರ ಪ್ರಗತಿಯನ್ನು ಆ ಸಮುದಾಯದಲ್ಲಿ ಮಹಿಳೆಯರು ಸಾಧಿಸಿರುವ ಪ್ರಗತಿಯಿಂದ ಅಳೆಯುತ್ತೇನೆ" ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಅವರ ಈ ಅಭಿಪ್ರಾಯವು ಈ ಮಹಿಳೆಯರ ಸಾಮಾಜಿಕ, ರಾಜಕೀಯ, ಆರ್ಥಿಕ ಸಬಲೀಕರಣಕ್ಕೆ ಪ್ರಾಧಾನ್ಯತೆ ನೀಡುತ್ತದೆ. ಈ ನಿಟ್ಟಿನಲ್ಲಿ ಮಹಿಳೆಯರನ್ನು ರಾಜಕೀಯವಾಗಿ ಸಬಲೀಕರಿಸುವ ಉದ್ದೇಶದಿಂದ ಭಾರತ ಸರ್ಕಾರವು ನಾರಿಶಕ್ತಿ ವಂದನ ಅಧಿನಿಯಮ, 2023 ಅನ್ನು ರೂಪಿಸಿದೆ. ಅಧಿನಿಯಮವು ಮಹಿಳೆಯರಿಗೆ ಶಾಸನಗಳನ್ನು ರೂಪಿಸುವ ಹಾಗೂ ನಿರ್ಣಯಗಳನ್ನು ಕೈಗೊಳ್ಳುವ ಪ್ರಕ್ರಿಯೆಯಲ್ಲಿ ಭಾಗವಹಿಸಲು ಅವಕಾಶ ಮಾಡಿಕೊಡುತ್ತದೆ. ಈ ಸಂಶೋಧನಾ ಲೇಖನವು ಭಾರತದ ಸಂಸತ್ತು ಮತ್ತು ರಾಜ್ಯ ಶಾಸನಸಭೆಗಳಲ್ಲಿ ಮಹಿಳೆಯರ ಪ್ರಸ್ತುತ ಪ್ರಾತಿನಿಧ್ಯತೆ, ನಾರಿಶಕ್ತಿ ವಂದನ ಅಧಿನಿಯಮ, 2023ರ ಹಿನ್ನೆಲೆ, ಸಾಂವಿಧಾನಿಕ ಉಪಬಂಧಗಳು, ಇದುವರೆಗೆ ಸಂಸತ್ತಿನಲ್ಲಿ ಮತ್ತು ರಾಜ್ಯ ಶಾಸನಸಭೆಗಳಲ್ಲಿ ಮಹಿಳೆಯರಿಗೆ ಮೀಸಲಾತಿ ನೀಡಲು ನಡೆದಿರುವ ಪ್ರಯತ್ನಗಳು ಮುಂತಾದ ಪ್ರಮುಖ ವಿಷಯಗಳ ಮೇಲೆ ಬೆಳಕು ಚೆಲ್ಲುತ್ತದೆ. ಇದರೊಂದಿಗೆ ಈ ಸಂಶೋಧನಾ ಲೇಖನದಲ್ಲಿ ಬಹುಮುಖ್ಯವಾಗಿ ನಾರಿಶಕ್ತಿ ವಂದನ ಅಧಿನಿಯಮ, 2023ನ್ನು ಅನುಷ್ಠಾನಗೊಳಿಸುವಲ್ಲಿ ಮುಖಾಮುಖಿಯಾಗುವ ಸವಾಲುಗಳು ಮತ್ತು ಪರಿಹಾರಗಳು ಮಹಿಳೆಯರ ರಾಜಕೀಯ ಭಾಗವಹಿಸುವಿಕೆಯಿಂದ ಆಡಳಿತದ ಮೇಲೆ ಉಂಟಾಗುವ ಪರಿಣಾಮಗಳು ಹಾಗೂ ಸಾಧಕ ಬಾಧಕಗಳನ್ನು ವಿಶ್ಲೇಷಣೆಗೆ ಒಳಪಡಿಸಲಾಗಿದೆ. ಈ ಸಂಶೋಧನಾ ಲೇಖನವನ್ನು ಪುಸ್ತಕಗಳು, ವರ್ತಮಾನ ಪತ್ರಿಕೆಗಳು, ಮಾಸಿಕಗಳು, ಸಮೀಕ್ಷೆಗಳು ಮ್ಯಾಗಜಿನ್‌ಗಳು ಅಂತರ್ಜಾಲ ತಾಣಗಳು ಮುಂತಾದ ಅನುಷಂಗಿಕ ದತ್ತಾಂಶಗಳ ನೆರವಿನಿಂದ ರಚಿಸಲಾಗಿದೆ.

## KEYWORDS:

ಮಹಿಳಾ ಮೀಸಲಾತಿ, ರಾಜಕೀಯ ಪಾಲ್ಗೊಳ್ಳುವಿಕೆ, ಮಹಿಳಾ ಸಬಲೀಕರಣ, ಲಿಂಗಸಮಾನತೆ, ಸಂವಿಧಾನ ತಿದ್ದುಪಡಿ, ಮಹಿಳಾ ಪ್ರಾತಿನಿಧ್ಯ, ಶಾಸನ ಸಭೆಗಳು.

## ಪ್ರಸ್ತಾವನೆ

ಭಾರತದಂತಹ ಪಿತೃಪ್ರಧಾನ ವ್ಯವಸ್ಥೆಯಲ್ಲಿ ಮಹಿಳೆಯರು ಸಾಮಾಜಿಕವಾಗಿ, ಆರ್ಥಿಕವಾಗಿ, ಸಾಂಸ್ಕೃತಿಕ ಕ್ಷೇತ್ರಗಳಲ್ಲಷ್ಟೇ ಅಲ್ಲದೆ ರಾಜಕೀಯ ಕ್ಷೇತ್ರದಲ್ಲಿಯೂ ಐತಿಹಾಸಿಕವಾಗಿ ನಿರ್ಲಕ್ಷ್ಯಕ್ಕೆ ಒಳಗಾಗಿದ್ದಾಳೆ ಮತ್ತು ಅಂಚಿಗೆ ತಳ್ಳಲ್ಪಟ್ಟಿದ್ದಾಳೆ. ನಮ್ಮ ಸಂವಿಧಾನವು ಅವಳಿಗೆ ಸಮಾನ ರಾಜಕೀಯ, ಆರ್ಥಿಕ, ಸಾಮಾಜಿಕ, ಹಕ್ಕುಗಳನ್ನು ಖಾತ್ರಿಗೊಳಿಸಿದಾಗ್ಯೂ ಪುರುಷ ಪ್ರಧಾನ ಭಾರತೀಯ ಸಾಮಾಜಿಕ, ರಾಜಕೀಯ ವ್ಯವಸ್ಥೆಯಲ್ಲಿ ಅವಳನ್ನು ದ್ವಿತೀಯ ದರ್ಜೆಯ ಪ್ರಜೆಯಂತೆ ಪರಿಗಣಿಸುತ್ತಿರುವುದು ಆಶಾದಾಯಕ ಬೆಳವಣಿಗೆಯೇನೂ ಅಲ್ಲ. ಮಹಿಳೆಯರ ರಾಜಕೀಯ ಭಾಗವಹಿಸುವಿಕೆ ಮತ್ತು ರಾಜಕೀಯ ಸಬಲೀಕರಣವು ರಾಷ್ಟ್ರವೊಂದರ ಸರ್ವಾಂಗೀಣ ಅಭಿವೃದ್ಧಿಗೆ ಅತ್ಯಂತ ಅನಿವಾರ್ಯ ಮತ್ತು

ಅವಶ್ಯಕ. ರಾಷ್ಟ್ರಪಿತ ಮಹಾತ್ಮಗಾಂಧೀಯವರು "ಸಾರ್ವಜನಿಕ ಜೀವನದಲ್ಲಿ ಮಹಿಳೆಯರ ಸಂಪೂರ್ಣ ಮತ್ತು ಸಮಾನ ಪಾಲ್ಗೊಳ್ಳುವಿಕೆಯ ಹೊರತಾಗಿ ಭಾರತದಲ್ಲಿ ನೈಜ ಪ್ರಗತಿ ಮತ್ತು ಸ್ವರಾಜ್ (Self Rule) ಗಳನ್ನು ಸಾಧಿಸಲು ಸಾಧ್ಯವಾಗುವುದಿಲ್ಲ" ಎಂದು ಪ್ರತಿಪಾದಿಸಿದರು. ಅಲ್ಲದೇ ಅವರು ದುಂಡು ಮೇಜಿನ ಪರಿಷತ್ತಿನ ಒಕ್ಕೂಟ ಸಂರಚನಾ ಸಮಿತಿಯ ಸಭೆ (Round Table Conference Federal Structure Committee Meeting) ಯಲ್ಲಿ 1931ರ ಸೆಪ್ಟೆಂಬರ್ 17ರಂದು ಮಹಿಳೆಯರಿಗೆ ಶಾಸನ ಸಭೆಗಳಲ್ಲಿ ಸೂಕ್ತ ಪ್ರಾತಿನಿಧ್ಯತೆ ನೀಡಬೇಕೆಂದು ಬಲವಾಗಿ ಪ್ರತಿಪಾದಿಸಿದರು. ಅವರು "ಮಹಿಳಾ ಸದಸ್ಯರ ಸೂಕ್ತಪಾಲನ್ನು ಹೊಂದಿಲ್ಲದಿರುವ ಶಾಸನ ಸಭೆಗಳನ್ನು ನಾನು ಬಹಿಷ್ಕರಿಸುತ್ತೇನೆ (I would boycott that Legislative Assembly which will not have a proper share of women members)" ಎಂದು ಘೋಷಿಸಿದರು.

ಪ್ರಸ್ತುತ ಭಾರತದ ಒಟ್ಟು ಜನಸಂಖ್ಯೆಯಲ್ಲಿ ಸುಮಾರು ಅರ್ಧದಷ್ಟಿರುವ ಮಹಿಳೆಯರಿಗೆ ಶಾಸನ ಸಭೆಗಳಲ್ಲಿ ಅಂದರೆ ಸಂಸತ್ತು ಮತ್ತು ರಾಜ್ಯ ಶಾಸಕಾಂಗಗಳಲ್ಲಿ ಸೂಕ್ತ ಪ್ರಾತಿನಿಧ್ಯತೆಯ ಕೊರತೆ ಇದೆ ಎಂಬುದನ್ನು ಈ ಅಂಕಿ ಅಂಶಗಳ ಮೂಲಕ ಪ್ರಸ್ತುತ ಪಡಿಸಬಹುದು. ಇಂಟರ್ ಪಾರ್ಲಿಮೆಂಟರಿ ಯೂನಿಯನ್ 2024ರಲ್ಲಿ ಬಿಡುಗಡೆ ಮಾಡಿರುವ ಅಂಕಿ ಅಂಶಗಳ ಪ್ರಕಾರ ವಿಶ್ವದ ಬೇರೆ ಬೇರೆ ದೇಶಗಳಲ್ಲಿ ಶಾಸನ ಸಭೆಗಳ ಕೆಳಸದನಗಳು ಭಾರತಕ್ಕೆ ಹೋಲಿಸಿದರೆ ಹೆಚ್ಚಿನ ಮಹಿಳಾ ಪ್ರಾತಿನಿಧ್ಯತೆ ಹೊಂದಿವೆ. ರವಾಂಡ, ಕ್ಯೂಬಾ, ನಿಕರಾಗುವ, ಪಾಕಿಸ್ತಾನ, ಬಾಂಗ್ಲಾದೇಶ, ಮೆಕ್ಸಿಕೋ, ಯುನೈಟೆಡ್ ಅರಬ್ ಎಮಿರೇಟ್ಸ್ ಈ ರಾಷ್ಟ್ರಗಳ ಶಾಸಕಾಂಗಗಳ ಕೆಳಸದನಗಳು ಅನುಕ್ರಮವಾಗಿ ಶೇಕಡಾ 63.8, 55.7, 55, 20, 21, 50.2, 50 ರಷ್ಟು ಮಹಿಳಾ ಪ್ರಾತಿನಿಧ್ಯತೆ ಹೊಂದಿವೆ. ರವಾಂಡ ದೇಶದ ಶಾಸಕಾಂಗ ಕೆಳಸದನವು ವಿಶ್ವದಲ್ಲಿಯೇ ಅತ್ಯಂತ ಹೆಚ್ಚಿನ ಮಹಿಳಾ ಪ್ರಾತಿನಿಧ್ಯತೆ ಹೊಂದಿದೆ. ಭಾರತದ ಸಂಸತ್ತಿನ ಕೆಳಸದನವಾದ ಲೋಕಸಭೆಯು ಪ್ರಸ್ತುತ ಶೇಕಡಾ 14ರಷ್ಟು ಮಹಿಳಾ ಪ್ರಾತಿನಿಧ್ಯತೆಯನ್ನು, ಅಂದರೆ ತನ್ನ 543 ಮಂದಿ ಒಟ್ಟು ಸದಸ್ಯರಲ್ಲಿ 74 ಮಂದಿ ಮಹಿಳಾ ಸದಸ್ಯರನ್ನು ಮಾತ್ರ ಹೊಂದಿದೆ. ಇದರಿಂದ ಭಾರತವು ಬಾಂಗ್ಲಾ (21%) ಮತ್ತು ಪಾಕಿಸ್ತಾನ (20%) ಕ್ಕಿಂತ ಕಡಿಮೆ ಮಹಿಳಾ ಪ್ರಾತಿನಿಧ್ಯತೆಯನ್ನು ಹೊಂದಿರುವುದು ಸ್ಪಷ್ಟವಾಗುತ್ತದೆ.

ಇನ್ನು ರಾಜ್ಯ ಶಾಸನಸಭೆಗಳಲ್ಲಿ ಮಹಿಳಾ ಪ್ರಾತಿನಿಧ್ಯತೆಯ ಚಿತ್ರಣ ಇದಕ್ಕಿಂತ ಭಿನ್ನವಾಗಿಲ್ಲ. ಅಲ್ಲಿಯೂ ಮಹಿಳಾ ಪ್ರಾತಿನಿಧ್ಯತೆಯ ಕೊರತೆ ಕಂಡು ಬರುತ್ತದೆ. ಪ್ರಸ್ತುತ ಕರ್ನಾಟಕ ವಿಧಾನ ಸಭೆಯಲ್ಲಿ 224 ಮಂದಿ ಸದಸ್ಯರಲ್ಲಿ ಕೇವಲ 10 ಮಂದಿ (4.5%) ಮಹಿಳಾ ಸದಸ್ಯರಿದ್ದಾರೆ. ಆಂಧ್ರಪ್ರದೇಶ ವಿಧಾನ ಸಭೆಯಲ್ಲಿ 175 ಮಂದಿ ಸದಸ್ಯರ ಪೈಕಿ 10 ಮಂದಿ (5.7%) ಮಹಿಳಾ ಸದಸ್ಯರಿದ್ದಾರೆ. ಛತ್ತೀಸ್‌ಗಢ ವಿಧಾನ ಸಭೆಯಲ್ಲಿ 90 ಮಂದಿ ಸದಸ್ಯರ ಪೈಕಿ 19 ಮಂದಿ (21%) ಮಹಿಳಾ ಸದಸ್ಯರಿದ್ದಾರೆ. ಪಶ್ಚಿಮ ಬಂಗಾಳದ ವಿಧಾನಸಭೆಯಲ್ಲಿ 294 ಮಂದಿ ಸದಸ್ಯರ ಪೈಕಿ 44 ಮಂದಿ (15%) ಮಹಿಳಾ ಸದಸ್ಯರಿದ್ದಾರೆ. ಬಿಹಾರ ವಿಧಾನ ಸಭೆಯಲ್ಲಿ 243 ಮಂದಿ ಸದಸ್ಯರ ಪೈಕಿ ಕೇವಲ 29 ಮಂದಿ (12%) ಮಹಿಳಾ ಸದಸ್ಯರಿದ್ದಾರೆ. ಭಾರತದಲ್ಲಿ ಛತ್ತೀಸ್‌ಗಢ ವಿಧಾನಸಭೆ ಅತ್ಯಂತ ಹೆಚ್ಚು ಮಹಿಳಾ ಪ್ರಾತಿನಿಧ್ಯತೆ ಹೊಂದಿರುವ ಶಾಸನ ಸಭೆಯಾಗಿದೆ. ಆದಾಗ್ಯೂ ಭಾರತದ ಯಾವ ರಾಜ್ಯದ ಶಾಸನಸಭೆಯೂ ಕೂಡ ಪ್ರತಿಶತ 20ಕ್ಕಿಂತ ಹೆಚ್ಚಿನ ಮಹಿಳಾ ಪ್ರಾತಿನಿಧ್ಯತೆ ಹೊಂದಿಲ್ಲ.

ಭಾರತದ ರಾಜ್ಯ ಶಾಸಕಾಂಗಗಳಲ್ಲಿ ಮಹಿಳಾ ಪ್ರಾತಿನಿಧ್ಯದ ರಾಷ್ಟ್ರೀಯ ಸರಾಸರಿ (National Average) ಪ್ರತಿಶತ 9 ಆಗಿದೆ. ಅಂದರೆ ಭಾರತದಾದ್ಯಂತ ರಾಜ್ಯ ಶಾಸನಸಭೆಗಳಲ್ಲಿ

ಪ್ರತಿ 100 ಮಂದಿ ಸದಸ್ಯರಲ್ಲಿ ಕೇವಲ 9 ಮಂದಿ ಮಹಿಳಾ ಸದಸ್ಯರಿದ್ದಾರೆ ಎಂದರ್ಥ. ಈ ಮೇಲಿನ ಎಲ್ಲಾ ಅಂಕಿ ಅಂಶಗಳು ಸಂಸತ್ತು ಮತ್ತು ರಾಜ್ಯ ಶಾಸನಸಭೆಗಳಲ್ಲಿ ಪ್ರಸ್ತುತ ಮಹಿಳೆಯರ ರಾಜಕೀಯ ಪ್ರಾತಿನಿಧ್ಯತೆಯ ಸ್ಥಿತಿಗತಿಗಳನ್ನು ಪ್ರದರ್ಶಿಸುತ್ತವೆ. ಆದರೆ ರಾಷ್ಟ್ರದ ಸರ್ವಾಂಗೀಣ ಅಭಿವೃದ್ಧಿ ಮತ್ತು ಒಳಗೊಳ್ಳುವಿಕೆಯ ರಾಜಕಾರಣದಲ್ಲಿ ಮಹಿಳೆಯರ ರಾಜಕೀಯ ಸಬಲೀಕರಣ ಅತ್ಯಂತ ಅನಿವಾರ್ಯ ಮತ್ತು ಅಗತ್ಯ. ಇದು ಸಾಧ್ಯವಾಗಬೇಕಾದರೆ ನಮ್ಮ ಶಾಸನಸಭೆಗಳಲ್ಲಿ ಮಹಿಳೆಯರಿಗೆ ಸೂಕ್ತ ಪ್ರಾತಿನಿಧ್ಯವನ್ನು ದೊರಕಿಸುವುದರ ಮೂಲಕ ಅವರ ಪ್ರಾತಿನಿಧ್ಯತೆಯ ಕೊರತೆಯನ್ನು ನಿವಾರಿಸಬೇಕು. ಈ ನಿಟ್ಟಿನಲ್ಲಿ ನಾರಿಶಕ್ತಿ ವಂದನ್ ಅಧಿನಿಯಮ ಅಥವಾ ಮಹಿಳಾ ಮೀಸಲಾತಿ ಕಾಯ್ದೆ, 2023 ಎಂದು ಕರೆಯಲ್ಪಡುವ 106ನೇ ಸಂವಿಧಾನ ತಿದ್ದುಪಡಿ ಕಾಯ್ದೆ, ಒಂದು ಐತಿಹಾಸಿಕ ಶಾಸನವಾಗಿದೆ. ಆದರೆ ಈ ಕಾಯ್ದೆ ತಕ್ಷಣ ಜಾರಿಗೆ ಬರದೆ, ಹೊಸ ಜನಗಣತಿ ಮತ್ತು ಕ್ಷೇತ್ರ ಪುನರ್ವಿಂಗಡಣಾ ಕಾರ್ಯ ಮುಕ್ತಾಯವಾದ ನಂತರ 2029ರ ವೇಳೆಗೆ ಜಾರಿಗೆ ಬರುವ ಸಾಧ್ಯತೆ ಇದೆ. ಪ್ರಸ್ತುತ ಸಂಶೋಧನಾ ಲೇಖನದಲ್ಲಿ ಈ ಕಾಯ್ದೆಯ ಹಿನ್ನೆಲೆ ಹಾಗೂ ಸಾಂವಿಧಾನಿಕ ಉಪಬಂಧಗಳು, ರೂಪುರೇಷೆಗಳು, ಲಕ್ಷಣಗಳನ್ನು ಚರ್ಚಿಸುವುದರೊಂದಿಗೆ ಈ ಕಾಯ್ದೆಯ ಸಾಧಕ ಬಾಧಕಗಳನ್ನು ವಿಶ್ಲೇಷಿಸಲಾಗಿದೆ.

**ಮಹಿಳಾ ಮೀಸಲಾತಿ ಕಾಯ್ದೆ – 2023 (Women Reservation Act)**

ಪಂಚಾಯತ್ ರಾಜ್ ಕಾಯ್ದೆ, 1992 (73ನೇ ಸಂವಿಧಾನ ತಿದ್ದುಪಡಿ ಕಾಯ್ದೆ) ಮತ್ತು ಮುನ್ಸಿಪಲ್ ಕಾಯ್ದೆ, 1992 (74ನೇ ಸಂವಿಧಾನ ತಿದ್ದುಪಡಿ ಕಾಯ್ದೆ)ಗಳನ್ನು ಅನುಷ್ಠಾನಗೊಳಿಸುವುದರ ಮೂಲಕ ಪಂಚಾಯತ್ ರಾಜ್ ಸಂಸ್ಥೆಗಳು ಮತ್ತು ಮುನ್ಸಿಪಲ್ ಸಂಸ್ಥೆಗಳಿಗೆ ಸಂವಿಧಾನಾತ್ಮಕ ಸ್ಥಾನಮಾನ ನೀಡುವುದರೊಂದಿಗೆ ಈ ಸಂಸ್ಥೆಗಳಲ್ಲಿ ಮಹಿಳೆಯರಿಗೆ 1/3 ರಷ್ಟು ಸ್ಥಾನಗಳನ್ನು ಮೀಸಲಿಡಲಾಯಿತು. ಪರಿಣಾಮವಾಗಿ ಈ ಗ್ರಾಮೀಣ ಮತ್ತು ನಗರ ಸ್ಥಳೀಯ ಸ್ವಯಂ ಸಂಸ್ಥೆಗಳಲ್ಲಿ ಮಹಿಳೆಯರ ಭಾಗವಹಿಸುವಿಕೆ ಗಣನೀಯವಾಗಿದೆ. ಇದರಿಂದ ಸ್ಥಳೀಯ ಸ್ವಯಂ ಸರ್ಕಾರಗಳಲ್ಲಿ ಮಹಿಳಾ ಸಬಲೀಕರಣ ಒಂದು ಮಟ್ಟಕ್ಕೆ ಸಾಧ್ಯವಾಗಿದೆ. ಆದರೆ ಸಂಸತ್ತು ಮತ್ತು ರಾಜ್ಯ ಶಾಸನಸಭೆಗಳಲ್ಲಿ ಈಗಾಗಲೇ ಪ್ರಸ್ತಾವನೆಯಲ್ಲಿ ಚರ್ಚಿಸಿದಂತೆ ಮಹಿಳಾ ಪ್ರಾತಿನಿಧ್ಯತೆ ಅತ್ಯಂತ ಕಡಿಮೆ ಇದೆ. ಈ ಶಾಸನಸಭೆಗಳಲ್ಲಿ ಮಹಿಳೆಯರಿಗೆ ಸೂಕ್ತ ಪ್ರಾತಿನಿಧ್ಯವನ್ನು ನೀಡುವುದರ ಮೂಲಕ ರಾಷ್ಟ್ರಮಟ್ಟದಲ್ಲಿ ಮಹಿಳೆಯರನ್ನು ರಾಜಕೀಯವಾಗಿ ಸಬಲೀಕರಿಸುವ ಮಹತ್ತರವಾದ ಉದ್ದೇಶದಿಂದ 106ನೇ ಸಂವಿಧಾನ ತಿದ್ದುಪಡಿ ಕಾಯ್ದೆಯ ಮೂಲಕ ನಾರಿಶಕ್ತಿ ವಂದನ್ ಅಧಿನಿಯಮ ಎಂಬ ಹೆಸರಿನ ಮಹಿಳಾ ಮೀಸಲಾತಿ ಕಾಯ್ದೆ, 2023ನ್ನು ರೂಪಿಸಲಾಗಿದೆ. ಈ ಕಾಯ್ದೆಯು ಲೋಕಸಭೆ, ರಾಜ್ಯ ವಿಧಾನ ಸಭೆಗಳು ಮತ್ತು ದೆಹಲಿ ರಾಷ್ಟ್ರೀಯ ರಾಜಧಾನಿ ಪ್ರದೇಶದ ವಿಧಾನ ಸಭೆಯಲ್ಲಿ ಮಹಿಳೆಯರಿಗೆ ಪ್ರತಿಶತ 33 (1/3) ರಷ್ಟು ಸ್ಥಾನಗಳನ್ನು ಮೀಸಲಿಡಲು ಅವಕಾಶ ಕಲ್ಪಿಸಿದೆ. ಸಂಸತ್ತು ಮತ್ತು ರಾಜ್ಯ ಶಾಸನಸಭೆಗಳಲ್ಲಿ ಮಹಿಳೆಯರಿಗೆ ಅವರ ಜನಸಂಖ್ಯೆಗೆ ಅನುಗುಣವಾಗಿ ಪ್ರಾತಿನಿಧ್ಯ ದೊರೆತಿಲ್ಲದ ಪ್ರಸ್ತುತ ಸಂದರ್ಭದಲ್ಲಿ ಈ ಕಾಯ್ದೆ ಹೊಸ ಜನಗಣತಿ ಮತ್ತು ಕ್ಷೇತ್ರ ಪುನರ್ವಿಂಗಡಣಾ ಕಾರ್ಯ ಮುಕ್ತಾಯವಾದ ನಂತರ 2029ರ ವೇಳೆಗೆ ಜಾರಿಗೆ ಬರುವ ಸಾಧ್ಯತೆ ಇದೆ. ಈ ಕಾಯ್ದೆ ರಾಜಕಾರಣದಲ್ಲಿ ಲಿಂಗ ಸಮಾನತೆಯನ್ನು ಸಾಧಿಸಲು ನೆರವಾಗುವುದರೊಂದಿಗೆ ಶಾಸನಗಳನ್ನು, ಸಾರ್ವಜನಿಕ ನೀತಿಗಳನ್ನು ರೂಪಿಸಿ, ಅನುಷ್ಠಾನಗೊಳಿಸುವ ಮತ್ತು ನಿರ್ಣಯ ಕೈಗೊಳ್ಳುವ ಪ್ರಕ್ರಿಯೆಯಲ್ಲಿ ಭಾಗವಹಿಸಲು ಮಹಿಳೆಯರಿಗೆ ಅವಕಾಶ ನೀಡುತ್ತದೆ. ಇದರಿಂದ ರಾಜಕೀಯ ಕ್ಷೇತ್ರದಲ್ಲಿ

ಮಹಿಳಾ ಸಬಲೀಕರಣವನ್ನು ಸಾಧಿಸಬಹುದು.

**ಮಹಿಳಾ ಮೀಸಲಾತಿ ಕಾಯ್ದೆ, 2023ರ ಉಪಬಂಧಗಳು**

1. ಲೋಕಸಭೆ, ರಾಜ್ಯ ವಿಧಾನ ಸಭೆಗಳು ಮತ್ತು ದೆಹಲಿ ರಾಷ್ಟ್ರೀಯ ರಾಜಧಾನಿ ಪ್ರದೇಶದ ವಿಧಾನ ಸಭೆಯಲ್ಲಿ ಮಹಿಳೆಯರಿಗೆ ಪ್ರತಿಶತ 33 ರಷ್ಟು ಸ್ಥಾನಗಳನ್ನು ಮೀಸಲಿಡತಕ್ಕದ್ದು.
2. ಮೇಲೆ ಹೆಸರಿಸಲಾದ ಶಾಸನಸಭೆಗಳಲ್ಲಿ ಮಹಿಳೆಯರಿಗೆ ಮೀಸಲಿರಿಸಿದ ಸ್ಥಾನಗಳಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಸೇರಿದ ಮಹಿಳೆಯರಿಗೆ 1/3 ರಷ್ಟು ಸ್ಥಾನಗಳನ್ನು ಮೀಸಲಿಡಬೇಕು.
3. ಶಾಸನಸಭೆಗಳಲ್ಲಿ ನೀಡಲಿರುವ ಈ ಮೀಸಲಾತಿಯು 106ನೇ ಸಂವಿಧಾನ ತಿದ್ದುಪಡಿ ಕಾಯ್ದೆ ಜಾರಿಗೆ ಬಂದ ದಿನದಿಂದ ಹದಿನೈದು ವರ್ಷಗಳವರೆಗೆ ಮುಂದುವರೆಯುತ್ತದೆ. ಸಂಸತ್ತು ಒಂದು ಕಾನೂನಿನ ಮೂಲಕ ಈ ಮೀಸಲಾತಿಯನ್ನು 15 ವರ್ಷಗಳಾಚೆಗೆ ವಿಸ್ತರಿಸಬಹುದು. ಅಂದರೆ ಸಂಸತ್ತು ತನ್ನ ಕಾನೂನಿನ ಮೂಲಕ ನಿರ್ಧರಿಸುವ ಅವಧಿಯವರೆಗೆ ಶಾಸನ ಸಭೆಗಳಲ್ಲಿ ಮಹಿಳಾ ಮೀಸಲಾತಿ ಮುಂದುವರೆಯುತ್ತದೆ ಎಂದರ್ಥ.
4. ಮಹಿಳಾ ಮೀಸಲಾತಿ ಕಾಯ್ದೆಯು ಹೊಸ ಜನಗಣತಿಯ ಅಂಕಿ ಅಂಶಗಳ ಆಧಾರದ ಮೇಲೆ ನಡೆಯುವ ಕ್ಷೇತ್ರ ಪುನರ್ವಿಂಗಡಣಾ ಕಾರ್ಯ ಮುಕ್ತಾಯಗೊಂಡ ನಂತರ ಜಾರಿಗೆ ಬರಲಿದೆ.
5. ಸಂಸತ್ತು ಕಾನೂನಿನ ಮೂಲಕ ನಿರ್ಧರಿಸುವಂತೆ ನಡೆಯುವ ಪ್ರತಿ ಕ್ಷೇತ್ರ ಪುನರ್ವಿಂಗಡಣಾ ಪ್ರಕ್ರಿಯೆ ಪೂರ್ಣಗೊಂಡ ನಂತರ ಶಾಸನ ಸಭೆಗಳಲ್ಲಿ ಮಹಿಳೆಯರಿಗೆ ಮೀಸಲಿಟ್ಟ ಸ್ಥಾನಗಳ ರೊಟೇಶನ್ ಜಾರಿಗೆ ಬರುತ್ತದೆ.

ಈ ಕಾಯ್ದೆಯಲ್ಲಿ ರಾಜ್ಯ ಸಭೆ ಮತ್ತು ವಿಧಾನ ಪರಿಷತ್ತುಗಳಲ್ಲಿ ಮಹಿಳೆಯರಿಗೆ ಮೀಸಲಾತಿ ನೀಡುವ ಪ್ರಸ್ತಾಪವಿಲ್ಲ. ಅಲ್ಲದೆ ಇತರೆ ಹಿಂದುಳಿದ ವರ್ಗ (ಒ.ಬಿ.ಸಿ) ಗಳಿಗೆ ಸೇರಿದ ಮಹಿಳೆಯರಿಗೆ ಶಾಸನ ಸಭೆಗಳಲ್ಲಿ ಮೀಸಲಾತಿ ನೀಡುವ ಪ್ರಸ್ತಾಪವೂ ಈ ಕಾಯ್ದೆಯಲ್ಲಿ ಇಲ್ಲ.

**ಮಹಿಳಾ ಮೀಸಲಾತಿ ಮಸೂದೆಗಳು**

- ಪ್ರಧಾನಿ ಶ್ರೀ ಹೆಚ್. ಡಿ. ದೇವೇಗೌಡರ ನೇತೃತ್ವದ ರಾಷ್ಟ್ರೀಯ ರಂಗ ಸರ್ಕಾರವು ಶಾಸನಸಭೆಗಳಲ್ಲಿ ಮೀಸಲಾತಿ ನೀಡುವ ಉದ್ದೇಶದಿಂದ 81ನೇ ಸಂವಿಧಾನ ತಿದ್ದುಪಡಿ ಮಸೂದೆಯನ್ನು 1996ರಲ್ಲಿ ಮಂಡಿಸಿತು. ಆದರೆ ಅವಧಿಗೆ ಮುನ್ನವೇ ಲೋಕಸಭೆ ವಿಸರ್ಜನೆಯಾದ್ದರಿಂದ ಈ ಮಸೂದೆ ನಷ್ಟವಾಯಿತು.
- ಪ್ರಧಾನಿ ಶ್ರೀ ಅಟಲ್ ಬಿಹಾರಿ ವಾಜಪೇಯಿ ನೇತೃತ್ವದ ರಾಷ್ಟ್ರೀಯ ಪ್ರಜಾಸತ್ತಾತ್ಮಕ ಮೈತ್ರಿಕೂಟ ಸರ್ಕಾರವು 1998ರಲ್ಲಿ ಸಂಸತ್ತಿನಲ್ಲಿ ಮಂಡಿಸಲಾದ ಮಹಿಳಾ ಮೀಸಲಾತಿ ವಿಧೇಯಕವು ಲೋಕಸಭೆ ವಿಸರ್ಜನೆಯಾದ್ದರಿಂದ ಮತ್ತೊಮ್ಮೆ ನಷ್ಟವಾಯಿತು. 2002 ಮತ್ತು 2003ರಲ್ಲಿಯೂ ಶ್ರೀ ವಾಜಪೇಯಿಯವರ ನೇತೃತ್ವದ ಎನ್. ಡಿ.ಎ. ಸರ್ಕಾರ ಮಂಡಿಸಿದ ಮೀಸಲಾತಿ ಮಸೂದೆ ಲೋಕಸಭೆಯಲ್ಲಿ ಅಂಗೀಕಾರವಾಗಲಿಲ್ಲ.
- 2008ರಲ್ಲಿ ಪ್ರಧಾನಿ ಶ್ರೀ ಮನಮೋಹನ್ ಸಿಂಗ್‌ರವರ ನೇತೃತ್ವದ ಸಂಯುಕ್ತ ಪ್ರಗತಿ ಪರ ಮೈತ್ರಿಕೂಟ ಸಮ್ಮಿಶ್ರ ಸರ್ಕಾರದಿಂದ ಈ ಸಂಬಂಧ ಮಂಡನೆಯಾದ 108ನೇ

ಸಂವಿಧಾನ ತಿದ್ದುಪಡಿ ಮಸೂದೆಯನ್ನು ರಾಜ್ಯಸಭೆ ಅಂಗೀಕರಿಸಿದರೂ, ಲೋಕ ಸಭೆ ಅಂಗೀಕರಿಸಲಿಲ್ಲ.

- ಪ್ರಧಾನಿ ಶ್ರೀ ನರೇಂದ್ರಮೋದಿಯವರ ನೇತೃತ್ವದ ಎನ್.ಡಿ.ಎ. ಸರ್ಕಾರವು ಸೆಪ್ಟೆಂಬರ್ 2023ರಲ್ಲಿ ಸಂಸತ್ತಿನಲ್ಲಿ ಮಂಡಿಸಿದ ಮಹಿಳಾ ಮೀಸಲಾತಿಗೆ ಸಂಬಂಧಿಸಿದ 128ನೇ ಸಂವಿಧಾನ ತಿದ್ದುಪಡಿ ಮಸೂದೆಯು ಲೋಕಸಭೆ ಮತ್ತು ರಾಜ್ಯಸಭೆಗಳೆರಡರಲ್ಲಿ ಅಂಗೀಕಾರಗೊಂಡು, ರಾಷ್ಟ್ರಾಧ್ಯಕ್ಷರಾದ ಶ್ರೀಮತಿ ದ್ರೌಪದಿ ಮುರ್ಮುರವರ ಅಂಕಿತದೊಂದಿಗೆ ಅದೇ ತಿಂಗಳಿನಲ್ಲಿ 106ನೇ ಸಂವಿಧಾನ ತಿದ್ದುಪಡಿ ಕಾಯ್ದೆ ಅಥವಾ ನಾರಿಶಕ್ತಿ ವಂದನಾ ಅಧಿನಿಯಮ ಆಗಿ ರೂಪುಗೊಂಡಿತು.

ಮಹಿಳಾ ಮೀಸಲಾತಿ ಕಾಯ್ದೆಯ ಪರವಾದಗಳು ಮೊದಲನೆಯದಾಗಿ, ಇಂದು ಸಂಸತ್ತು ಮತ್ತು ರಾಜ್ಯ ಶಾಸನಸಭೆಗಳಲ್ಲಿ ಮಹಿಳೆಯರಿಗೆ ಅವರ ಜನಸಂಖ್ಯೆಗೆ ಅನುಗುಣವಾದ ಪ್ರಾತಿನಿಧ್ಯತೆ ದೊರೆತಿಲ್ಲ. ಅವರಿಗೆ ಸೂಕ್ತ ರಾಜಕೀಯ ಪ್ರಾತಿನಿಧ್ಯ ದೊರಕಿಸಿಕೊಡುವುದು ಅಗತ್ಯ. ಮೊದಲನೆ ಲೋಕಸಭೆಯಿಂದ ಪ್ರಸ್ತುತ ಹದಿನೇಳನೇ ಲೋಕಸಭೆಯವರೆಗೆ ಮಹಿಳಾ ಪ್ರಾತಿನಿಧ್ಯತೆಯಲ್ಲಿ ಗಣನೀಯ ಪ್ರಮಾಣ (ಪ್ರತಿಶತ 5 ರಿಂದ ಪ್ರತಿಶತ 15ರವರೆಗೆ) ದಲ್ಲಿ ಹೆಚ್ಚಳವಾಗಿರುವುದು ನಿಜ. ಆದರೆ ಬೇರೆ ರಾಷ್ಟ್ರಗಳಿಗೆ ಹೋಲಿಸಿದರೆ ಇದು ಅತ್ಯಂತ ಕಡಿಮೆ ಎಂದು ಹೇಳಬಹುದು. ಈ ವಿಷಯವನ್ನು ಕುರಿತು ಪ್ರಬಂಧದ ಪ್ರಸ್ತಾವನೆಯಲ್ಲಿ ಅಂಕಿ ಅಂಶಗಳೊಂದಿಗೆ ಪ್ರಸ್ತುತಪಡಿಸಲಾಗಿದೆ.

ಎರಡನೆಯದಾಗಿ, ಒಳಗೊಳ್ಳುವಿಕೆಯ ರಾಜಕಾರಣದ ಪರಿಕಲ್ಪನೆಯನ್ನು ಸಾಕಾರಗೊಳಿಸಲು ಮಹಿಳೆಯರಿಗೆ ಶಾಸನಸಭೆಗಳಲ್ಲಿ ಮೀಸಲಾತಿ ನೀಡುವುದು ಅಗತ್ಯ. ಇಲ್ಲವಾದರೆ ಈ ದೇಶದ ಜನಸಂಖ್ಯೆಯಲ್ಲಿ ಅರ್ಧದಷ್ಟಿರುವ ಮಹಿಳೆಯರಿಗೆ ಸೂಕ್ತ ರಾಜಕೀಯ ಪ್ರಾತಿನಿಧ್ಯ ನೀಡದೆ, ಅವರನ್ನು ರಾಜಕೀಯ ಕ್ಷೇತ್ರದಿಂದ ಹೊರಗಿಟ್ಟು ರಾಷ್ಟ್ರದ ಸರ್ವಾಂಗೀಣ ಅಭಿವೃದ್ಧಿಯನ್ನು ಸಾಧಿಸಲು ಸಾಧ್ಯವಿಲ್ಲ.

ಮೂರನೆಯದಾಗಿ, ಲಿಂಗಸಮಾನತೆಯನ್ನು ಸಾಧಿಸಲು ರಾಜಕಾರಣದಲ್ಲಿ ಮಹಿಳೆಯರ ಪ್ರಾತಿನಿಧ್ಯ ಅತ್ಯಂತ ಅಗತ್ಯ. ಆದರೆ ಈಗಾಗಲೇ ಚರ್ಚಿಸಿದಂತೆ ಭಾರತದ ರಾಜಕೀಯ ಕ್ಷೇತ್ರದಲ್ಲಿ ಮಹಿಳೆಯರ ಪ್ರಾತಿನಿಧ್ಯತೆ ಅತ್ಯಂತ ಕಡಿಮೆ ಇದೆ. ಉದಾ : 2023ರ ಜಾಗತಿಕ ಲಿಂಗ ಅಂತರ ವರದಿ (Global Gender Gap Report – 2023) ಯ ಪ್ರಕಾರ ಭಾರತವು ಮಹಿಳಾ ಸಬಲೀಕರಣದಲ್ಲಿ 146ರಲ್ಲಿ 48ನೇ ಸ್ಥಾನ (Rank) ಪಡೆದುಕೊಂಡಿದೆ. ಇದು ಬೇರೆ ದೇಶಗಳಿಗೆ ಹೋಲಿಸಿದರೆ ತುಂಬಾ ಕಡಿಮೆ ಎನಿಸುತ್ತದೆ. ರಾಜಕಾರಣದಲ್ಲಿ ಮಹಿಳೆಯರಿಗೆ ಮೀಸಲಾತಿ ನೀಡುವುದರಿಂದ ಜಾಗತಿಕ ಲಿಂಗ ಅಂತರವನ್ನು ಕಡಿಮೆ ಮಾಡಬಹುದು.

ನಾಲ್ಕನೆಯದಾಗಿ, ಮಹಿಳಾ ಮೀಸಲಾತಿ ಕಾಯ್ದೆಯ ಅನ್ವಯ ಗಣನೀಯ ಸಂಖ್ಯೆಯಲ್ಲಿ ಶಾಸನ ಸಭೆಗಳಿಗೆ ಆಯ್ಕೆಯಾಗುವ ಮಹಿಳೆಯರು ಕಾನೂನುಗಳು ಹಾಗೂ ನೀತಿಗಳನ್ನು ರೂಪಿಸುವ ಪ್ರಕ್ರಿಯೆಯಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳಬಹುದು. ಅವರು ಶಾಸನ ಸಭೆಗಳಲ್ಲಿ ಚರ್ಚೆಗಳ ಗುಣಮಟ್ಟವನ್ನು ಮತ್ತಷ್ಟು ಉತ್ಕೃಷ್ಟಗೊಳಿಸಬಹುದು. ಈ ಮೂಲಕ ಮಹಿಳೆಯರು ಶಾಸನಸಭೆಗಳ ಕಾರ್ಯನಿರ್ವಹಣೆಗೆ ಅರ್ಥಪೂರ್ಣ ಕೊಡುಗೆ ನೀಡಬಲ್ಲರು.

ಐದನೆಯದಾಗಿ, ಮಹಿಳಾ ಮೀಸಲಾತಿ ಕಾಯ್ದೆಯು ಮಹಿಳೆಯರಿಗೆ ಶಾಸನಗಳನ್ನು, ಸಾರ್ವಜನಿಕ ನೀತಿಗಳನ್ನು ರೂಪಿಸಿ, ಅನುಷ್ಠಾನಗೊಳಿಸುವ ಮತ್ತು ನಿರ್ಣಯ ಕೈಗೊಳ್ಳುವ

ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳುವ ಅವಕಾಶ ನೀಡುತ್ತದೆ. ಇದರಿಂದ ರಾಜಕೀಯ ಕ್ಷೇತ್ರದಲ್ಲಿ ಮಹಿಳೆಯರ ಸಬಲೀಕರಣ ಸಾಧ್ಯವಾಗುತ್ತದೆ. ಮಹಿಳೆಯರ ರಾಜಕೀಯ ಸಬಲೀಕರಣವು ರಾಜಕೀಯೇತರ ಕ್ಷೇತ್ರಗಳಲ್ಲಿಯೂ ನಾಯಕತ್ವ ವಹಿಸಲು ಮಹಿಳೆಯರಿಗೆ ಪ್ರೇರಣೆ ನೀಡುತ್ತದೆ. ಇದರಿಂದ ವಿವಿಧ ಕ್ಷೇತ್ರಗಳಲ್ಲಿ ಮಹಿಳಾ ಸಬಲೀಕರಣವನ್ನು ಸಾಧಿಸಬಹುದು.

ಆರನೆಯದಾಗಿ, ಮಹಿಳಾ ಮೀಸಲಾತಿ ಕಾಯ್ದೆಯು ಶಾಸನ ಸಭೆಗಳಲ್ಲಿ ಮಹಿಳಾ ಕೇಂದ್ರಿತ ವಿಷಯಗಳ ಚರ್ಚೆಗೆ ಅವಕಾಶ ಮಾಡಿಕೊಡುತ್ತದೆ. ಮಹಿಳಾ ಸಂಸದರು ಲಿಂಗಾಧಾರಿತ ಹಿಂಸೆ, ಮಹಿಳೆಯರ ಮೇಲೆ ನಡೆಯುವ ದೌರ್ಜನ್ಯ, ಸಾಮೂಹಿಕ ಅತ್ಯಾಚಾರ, ಮಹಿಳೆಯರ ಆರೋಗ್ಯ, ಮಹಿಳೆಯರ ಆರ್ಥಿಕ ಸಬಲೀಕರಣ ಮುಂತಾದ ವಿಷಯಗಳಿಗೆ ಸಂಸತ್ತಿನಲ್ಲಿ ಮತ್ತು ರಾಜ್ಯ ಶಾಸಕಾಂಗಗಳಲ್ಲಿ ಚರ್ಚೆ ನಡೆಸುವ ಸಂದರ್ಭದಲ್ಲಿ, ಸಾರ್ವಜನಿಕ ನೀತಿಗಳನ್ನು ರೂಪಿಸುವಾಗ, ನಿರ್ಣಯಗಳನ್ನು ಕೈಗೊಳ್ಳುವಾಗ ಆದ್ಯತೆ ನೀಡಬಹುದು. ಇದರಿಂದ ಮಹಿಳೆಯರ ಸಮಸ್ಯೆಗಳನ್ನು ನಿವಾರಿಸಬಹುದು ಮತ್ತು ಅವರ ಪ್ರಗತಿಯನ್ನು ಸಾಧಿಸಬಹುದು.

ಏಳನೆಯದಾಗಿ, ರಾಜಕೀಯ ಕ್ಷೇತ್ರದಲ್ಲಿನ ಮಹಿಳಾ ನಾಯಕಿಯರು, ಯುವತಿಯರಿಗೆ ಮಾದರಿಯಾಗಿ ವಿವಿಧ ಕ್ಷೇತ್ರಗಳಲ್ಲಿ ನಾಯಕತ್ವ ವಹಿಸಲು ಪ್ರೇರೇಪಿಸಬಹುದು. ಅಲ್ಲದೆ ಮಹಿಳಾ ರಾಜಕೀಯ ಪ್ರಾತಿನಿಧ್ಯತೆಯೂ ಕೂಡ ನಾಯಕತ್ವದ ಏಕತಾನತೆಗೆ ವಿದಾಯ ಹೇಳುತ್ತದೆ.

ಎಂಟನೆಯದಾಗಿ, ಮಹಿಳಾ ಮೀಸಲಾತಿ ಕಾಯ್ದೆಯ ಪರಿಣಾಮವಾಗಿ ಗಣನೀಯ ಸಂಖ್ಯೆಯ ಮಹಿಳೆಯರು ಶಾಸನ ಸಭೆಗಳನ್ನು ಪ್ರವೇಶಿಸುವುದರಿಂದ ನಿರ್ಣಯ ಕೈಗೊಳ್ಳುವ ಪ್ರಕ್ರಿಯೆಗೆ ವೈವಿಧ್ಯಮಯವಾದ ದೃಷ್ಟಿಕೋನ ಪ್ರಾಪ್ತವಾಗುತ್ತದೆ. ಇಂತಹ ದೃಷ್ಟಿಕೋನವು ಉತ್ತಮ ನೀತಿ ನಿರೂಪಣೆ ಮತ್ತು ಉತ್ತಮ ಆಡಳಿತ ನಿರ್ವಹಣೆಗೆ ಎಡೆಮಾಡಿಕೊಡಬಹುದು.

ಒಂಭತ್ತನೆಯದಾಗಿ, ಈ ಕಾಯ್ದೆಯು ವಿಶೇಷವಾಗಿ ತಳ ಸಮುದಾಯದ ಮಹಿಳೆಯರಿಗೆ ಅಂದರೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಮಹಿಳೆಯರಿಗೆ ಸಂಸತ್ತು ಮತ್ತು ರಾಜ್ಯ ಶಾಸಕಾಂಗಗಳಲ್ಲಿ ಒಳಮೀಸಲಾತಿ ಕಲ್ಪಿಸಲು ಅವಕಾಶ ನೀಡುವ ಮೂಲಕ ಅವರ ರಾಜಕೀಯ ಸಬಲೀಕರಣಕ್ಕೆ ನೆರವಾಗುತ್ತದೆ.

**ಮಹಿಳಾ ಮೀಸಲಾತಿ ಕಾಯ್ದೆ – 2023ರ ವಿರುದ್ಧ ವಾದಗಳು**

ಮೊದಲನೆಯದಾಗಿ, ಮಹಿಳಾ ಮೀಸಲಾತಿ ಕಾಯ್ದೆ 2023ನ್ನು ಅನುಷ್ಠಾನ ಗೊಳಿಸುವುದು ವಿಳಂಬವಾಗುತ್ತದೆ. ಏಕೆಂದರೆ ಈ ಕಾಯ್ದೆಯನ್ನು ಹೊಸ ಜನಗಣತಿ ಮತ್ತು ಕ್ಷೇತ್ರ ಪುನರ್ವಿಂಗಡಣಾ ಕಾರ್ಯಮುಗಿದ ನಂತರ 2029ರ ವೇಳೆಗೆ ಅನುಷ್ಠಾನಗೊಳಿಸುವ ಸಾಧ್ಯತೆ ಇದೆ. ಇದರಿಂದಾಗಿ ವಿಳಂಬಿತ ನ್ಯಾಯ ನಿರಾಕರಿಸಲ್ಪಟ್ಟ ನ್ಯಾಯ ಎಂಬಂತಾಗುತ್ತದೆ.

ಎರಡನೆಯದಾಗಿ, ಈಗಾಗಲೇ ಸಬಲೀಕರಣಗೊಂಡಿರುವ ರಾಜಕೀಯ ಕುಟುಂಬಗಳು ಈ ಕಾಯ್ದೆಯ ಲಾಭವನ್ನು ಪಡೆದುಕೊಳ್ಳಬಹುದು. ಇಂತಹ ಕುಟುಂಬಗಳ ಮಹಿಳೆಯರು ಅಂದರೆ ಮಗಳು, ಸೊಸೆ, ಹೆಂಡತಿ, ಅಕ್ಕ, ತಂಗಿ, ನಾದಿನಿ ಮುಂತಾದ ರಕ್ತ ಸಂಬಂಧಿಗಳು ರಾಜಕೀಯ ಮೀಸಲಾತಿಯನ್ನು ನಗದೀಕರಿಸಿಕೊಳ್ಳಬಹುದು. ಹೀಗೆ ಈ ಕಾಯ್ದೆ ರಾಜಕೀಯ ಸ್ವಜನ ಪಕ್ಷಪಾತ (Political Nepotism) ಕ್ಕೆ ಎಡೆ ಮಾಡಿಕೊಡಬಹುದು.

ಮೂರನೆಯದಾಗಿ, ನಾರಿಶಕ್ತಿ ವಂದನ್ ಅಧಿನಿಯಮದಲ್ಲಿ ಪರಿಶಿಷ್ಟ ಜಾತಿ ಮತ್ತು

ಪರಿಶಿಷ್ಟ ಪಂಗಡಗಳ ಮಹಿಳೆಯರಿಗೆ ಶಾಸನಸಭೆಗಳಲ್ಲಿ ಮೀಸಲಾತಿ ನೀಡಲಾಗಿದ್ದು, ಇತರ ಹಿಂದುಳಿದ ವರ್ಗಗಳ ಮಹಿಳೆಯರಿಗೆ ನೀಡದೆ ಇರುವುದು ಭಾರತ ಸಂವಿಧಾನದ 14 ಮತ್ತು 15ನೇ ವಿಧಿಗಳ ಉಲ್ಲಂಘನೆಯಾಗಿದೆ. ಆದ್ದರಿಂದ ಈ ಕಾಯ್ದೆಯ ಅನುಷ್ಠಾನವನ್ನು ಈ ವರ್ಗದ ಮಹಿಳೆಯರು ವಿರೋಧಿಸಬಹುದು.

ನಾಲ್ಕನೆಯದಾಗಿ, ಮಹಿಳೆ ಎಂಬುದು ಜಾತಿಯಂತೆ ಒಂದು ಏಕರೂಪದ ಸಮುದಾಯ (Homogeneous Community) ವಲ್ಲ. ಆದ್ದರಿಂದ ಜಾತಿಯನ್ನು ಆಧರಿಸಿ ಮೀಸಲಾತಿ ನೀಡುವಂತೆ ಲಿಂಗವನ್ನು ಆಧರಿಸಿ ಮಹಿಳೆಯರಿಗೆ ಮೀಸಲಾತಿ ನೀಡಬಾರದು ಎಂಬುದು ಕೆಲವರ ವಾದವಾಗಿದೆ.

ಐದನೆಯದಾಗಿ, ಭಾರತೀಯ ಪುರುಷ ಪ್ರಧಾನ ಸಮಾಜದಲ್ಲಿ ಮಹಿಳೆಯರು ರಾಜಕೀಯ ಭೂಮಿಕೆಯಲ್ಲಿ ರಾರಾಜಿಸುವುದಕ್ಕೆ ವಿರೋಧಗಳು ಎದುರಾಗಬಹುದು ಎಂಬ ವಾದಗಳು ಇವೆ.

ಆರನೆಯದಾಗಿ, ಈಗಾಗಲೇ ಪಂಚಾಯ್ತಿಗಳಲ್ಲಿ ಮಹಿಳಾ ಪ್ರತಿನಿಧಿಗಳ ಪರವಾಗಿ ಅವರ ಕುಟುಂಬದ ಪುರುಷರು ಅಂದರೆ ತಂದೆ, ಪತಿ ಅಧಿಕಾರ ಚಲಾಯಿಸುತ್ತಿರುವುದನ್ನು ಗಮನಿಸಬಹುದು. ಈ ಪ್ರವೃತ್ತಿ ಮಹಿಳಾ ಮೀಸಲಾತಿ ಕಾಯ್ದೆಯ ಫಲಿತವಾಗಿ ಸಂಸತ್ತು ಮತ್ತು ರಾಜ್ಯ ಶಾಸನಸಭೆಗಳಿಗೆ ಚುನಾಯಿಸಲ್ಪಡುವ ಮಹಿಳೆಯರ ಕುಟುಂಬಗಳಲ್ಲಿ ಮುಂದುವರಿಯಬಹುದು. ಇದು ರಾಷ್ಟ್ರ ಮತ್ತು ರಾಜ್ಯಮಟ್ಟದಲ್ಲಿ ನಕಲು ನಾಯಕತ್ವಕ್ಕೆ ಅವಕಾಶ ಮಾಡಿಕೊಡಬಹುದು.

ಏಳನೆಯದಾಗಿ, ಮಹಿಳಾ ಮೀಸಲಾತಿಯ ಆಧಾರದ ಮೇಲೆ ಶಾಸನ ಸಭೆಗೆ ಆಯ್ಕೆಯಾಗುವವರು ತಮ್ಮ ಪಾತ್ರವನ್ನು ಸಮರ್ಥವಾಗಿ ನಿಭಾಯಿಸಲು ಅವಶ್ಯಕವಾದ ಸಾಮರ್ಥ್ಯ, ಪ್ರತಿಭೆ ಮತ್ತು ಕೌಶಲಗಳನ್ನು ಹೊಂದಿರದೇ ಇರಬಹುದು ಎಂಬ ಸಂಶಯಗಳೂ ಅಲ್ಲಲ್ಲಿ ವ್ಯಕ್ತವಾಗಿವೆ.

ಅಂತಿಮವಾಗಿ ಮಹಿಳಾ ಮೀಸಲಾತಿ ಕಾಯ್ದೆಗೆ ವಿವಿಧ ರಾಜಕೀಯ ಪಕ್ಷಗಳ ಪುರುಷ ನಾಯಕರಿಂದ ಪ್ರತಿರೋಧಗಳು ಎದುರಾಗಬಹುದು. ಏಕೆಂದರೆ ಈ ಮಸೂದೆ ರಾಜಕೀಯ ಸಂರಚನೆಯ ಮೇಲೆ ಈಗಾಗಲೇ ಇರುವ ಪುರುಷ ಪ್ರಾಧಾನ್ಯತೆ ಮತ್ತು ನಿಯಂತ್ರಣಕ್ಕೆ ಬೆದರಿಕೆ ಒಡ್ಡುತ್ತದೆ.

**ಸಮಾರೋಪ**

ಶಾಸನಸಭೆಗಳಲ್ಲಿ ಮಹಿಳಾ ಮೀಸಲಾತಿಯ ವಿರುದ್ಧ ಯಾವುದೇ ವಾದಗಳಿದ್ದರೂ ಶಾಸನ ಸಭೆಗಳಲ್ಲಿ ಮಹಿಳೆಯರಿಗೆ ಸೂಕ್ತ ಪ್ರಾತಿನಿಧ್ಯತೆ ಒದಗಿಸುವುದು ಒಳಗೊಳ್ಳುವ ರಾಜಕಾರಣ ಮತ್ತು ಮಹಿಳಾ ಸಬಲೀಕರಣವನ್ನು ಉತ್ತೇಜಿಸಲು ಪ್ರಸ್ತುತ ಪರಿಸ್ಥಿತಿಯಲ್ಲಿ ಅತ್ಯಂತ ಅನಿವಾರ್ಯವಾಗಿದೆ. ಮಹಿಳಾ ಮೀಸಲಾತಿ ಕಾಯ್ದೆಯು ಮಹಿಳಾ ಸಬಲೀಕರಣದತ್ತ ಇಟ್ಟ ಒಂದು ದಿಟ್ಟ ಹೆಜ್ಜೆಯಾಗಿದೆ. ನಾವುಗಳು ಪುರುಷ ಪ್ರಧಾನ ಮನೋವ್ಯವಸ್ಥೆಯಿಂದ ಹೊರಬಂದು ಚಿಂತಿಸಬೇಕಾಗಿದೆ. ರಾಜಕೀಯ ಪಕ್ಷಗಳಲ್ಲಿ ಅಧ್ಯಕ್ಷರು, ಕಾರ್ಯದರ್ಶಿ, ಪ್ರಧಾನ ಕಾರ್ಯದರ್ಶಿ, ಕೋಶಾಧಿಕಾರಿ ಮುಂತಾದ ಆಯಕಟ್ಟಿನ ಸ್ಥಾನಗಳನ್ನು ಮಹಿಳೆಯರಿಗೆ ಮೀಸಲಿಡುವ ಮೂಲಕ ಆಂತರಿಕ ಪ್ರಜಾಪ್ರಭುತ್ವ ತತ್ವವನ್ನು ಅಳವಡಿಸಿಕೊಳ್ಳಬೇಕಾಗಿದೆ. ಮಹಿಳೆಯರ ರಾಜಕೀಯ ಹಕ್ಕುಗಳ ಬಗೆಗೆ ಅರಿವು ಮೂಡಿಸಬೇಕಾಗಿದೆ. ಮಹಿಳಾ ಪ್ರತಿನಿಧಿಗಳಿಗೆ ಸಂಸದೀಯ ಪ್ರಕ್ರಿಯೆಗಳ ಬಗೆಗೆ ಪರಿಣಾಮಕಾರಿ ತರಬೇತಿ ನೀಡಿ ರಾಜಕೀಯ

ನಾಯಕತ್ವಕ್ಕೆ ಅವರನ್ನು ಸಜ್ಜುಗೊಳಿಸಬೇಕಿದೆ. ಮಹಿಳಾ ಮೀಸಲಾತಿ ಕಾಯ್ದೆಯ ಅಡಿಯಲ್ಲಿ ಶಾಸನಸಭೆಗಳಿಗೆ ಆಯ್ಕೆಯಾದ ಮಹಿಳಾ ಪ್ರತಿನಿಧಿಗಳು ತಮ್ಮ ಕುಟುಂಬದ ಪುರುಷ ಸದಸ್ಯರ ಪ್ರಭಾವ ತಮ್ಮ ಮೇಲೆ ಆಗದಂತೆ ಎಚ್ಚರಿಕೆ ವಹಿಸುವ ಮೂಲಕ ಪ್ರಜಾಪ್ರಭುತ್ವದ ಬೆಳವಣಿಗೆಗೆ ಅತ್ಯಂತ ಮಾರಕವಾದ ನಕಲು ನಾಯಕತ್ವ (Proxy Leadership) ತಲೆ ಎತ್ತದಂತೆ ಎಚ್ಚರ ವಹಿಸಬೇಕು. ಎಲ್ಲಕ್ಕಿಂತ ಮಿಗಿಲಾಗಿ ಶಾಸನ ಸಭೆಗಳಲ್ಲಿ ಮಹಿಳೆಯರ ಸಕ್ರಿಯ ಪಾಲ್ಗೊಳ್ಳುವಿಕೆಯಿಂದ ಶಾಸಕಾಂಗ, ಕಾರ್ಯಾಂಗ ಮುಂತಾದ ಪ್ರಜಾಸತ್ತಾತ್ಮಕ ಸಂಸ್ಥೆಗಳು ಮತ್ತಷ್ಟು ಸಂವರ್ಧಿಸುತ್ತವೆ ಎಂಬುದನ್ನು ಇಂದು ನಾವೆಲ್ಲರೂ ಅರಿತುಕೊಳ್ಳಬೇಕಾಗಿದೆ.

## ಪರಾಮರ್ಶನ ಗ್ರಂಥಗಳು:


1. Election Commission of India (results.eci.gov.in) – https://www.myneta.info / PRS–chhattisgarh.
2. The Constitution of India. https://www.india.gov.in
3. Jain. M (2022). A Study on Women Reservation in the Legislature and its impact. Nyayashastra Law Review, volume II, Issue II.
4. Panda. S (2001), Reservation for women in Union and State Legislative : A perspective, Indian Journal of PA, Vol. XLVIII.
5. Madhu. K (1996) Women and Politics beyond quotas, EPW, Oct 20, 1996.
6. West Bengal Assembly / India www.themirror.com
7. www.tribuneindia.com



**Funding:**

This study was not funded by any grant.


**Conflict of interest:**

The Authors have no conflict of interest to declare that they are relevant to the content of this article.


**About the License:**

© The Authors 2024. The text of this article is open access and licensed under a Creative Commons Attribution 4.0 International License.